ಕೊಟ್ಟಿದ್ದೀರಿ. ಈ ರೀತಿಯಾದ ತಪ್ಪು ಉತ್ತರವನ್ನು ತಾವು ದಯಮಾಡಿ ಕೊಡುವುದಕ್ಕೆ ಹೋಗಬೇಡಿ. ಅಲ್ಲಿ ಯಾವುದಕ್ಕೂ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಲ್ಲ. ಬೇಕಾದರೆ ಮಾನ್ಯ ಇಂಧನ ಸಚಿವರನ್ನು ಕೇಳಬಹುದು. ವಿದ್ಯುತ್ ಸಂಪರ್ಕ ಪಡೆದುಕೊಳ್ಳಲು ಇವರು ಅಲ್ಲಿ ರಿಜಿಸ್ಟರ್ ಮಾಡಿಸಿಲ್ಲ. ಈ ಬಗ್ಗೆ ಕೆಡಿಪಿ ಸಭೆಯಲ್ಲಿ ಮತ್ತು ಇತರೇ ಸಭೆಗಳಲ್ಲಿಯೂ ಕೂಡ ಕೇಳಿದ್ದೇನೆ. ಸುಮಾರು 5–6 ವರ್ಷಗಳಿಂದ ಇಡೀ ರಾಜ್ಯದಲ್ಲಿ ಸುಮಾರು 7–8 ಸಾವಿರ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕವನ್ನು ಒದಗಿಸಲಾಗಿಲ್ಲ. ಆದ್ದರಿಂದ, ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುವುದೇನೆಂದರೆ, ಎಷ್ಟು ಬೋರ್‌ವೆಲ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಬೇಕಾಗಿದೆಯೋ ಅವುಗಳಿಗೆ ಸಮಯ ನಿಗದಿ ಮಾಡಿ. ಅಂದರೆ, ಎರಡು, ಮೂರು, ಅಥವಾ ಆರು ತಿಂಗಳೊಳಗೆ ವಿದ್ಯುತ್ ಸಂಪರ್ಕವನ್ನು ಒದಗಿಸಿ ರೈತರಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ:– ಮಾನ್ಯ ಅಧ್ಯಕ್ಷರೆ, ನನಗೆ ಒಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು:– ಪ್ರಶ್ನೋತ್ತರ ವೇಳೆ ಪ್ರಾರಂಭವಾಗಿ ಈಗಾಗಲೇ ಒಂದು ಗಂಟೆ ಆಗಿದೆ. ಈಗ ಪ್ರಶ್ನೋತ್ತರ ವೇಳೆಯನ್ನು ಮುಕ್ತಾಯ ಮಾಡುತ್ತೇನೆ. ಮಾನ್ಯ ಸುಧಾಕರ್‌ರವರೆ ಉತ್ತರ ಹೇಳಿ.

ಶ್ರೀ ಡಿ.ಸುಧಾಕರ್:– ಮಾನ್ಯ ಅಧ್ಯಕ್ಷರೆ, 2008–09ನೇ ಸಾಲಿಗೆ ಸಂಬಂಧಪಟ್ಟಂಥ ಮಾಹಿತಿಯನ್ನು ನಾನು ಕೊಟ್ಟಿದ್ದೇನೆ. 2009–10ನೇ ಸಾಲಿಗೆ ಸಂಬಂದಪಟ್ಟಂಥ ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೆ ನಾವು ಟೆಂಡರ್ ಕರೆಯುತ್ತೇವೆಂದು ಹೇಳಿದ್ದೇನೆ. 2009–9ನೇ ಸಾಲಿನಲ್ಲಿ 927 ಬೋರ್‌ವೆಲ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗಿದೆ. ರಾಜ್ಯದಲ್ಲಿ ಈ ವರ್ಷ ಸುಮಾರು 23 ಸಾವಿರ ಬೋರ್‌ವೆಲ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಬೇಕಾಗಿದೆ. ಇದನ್ನು ಹಂತ ಹಂತವಾಗಿ ಮಾಡುವುದಕ್ಕೆ ಸರ್ಕಾರ ಬದ್ಧವಾಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

14(107) ಶ್ರೀ ಖಾದರ್ ಯು.ಟಿ. (ಮಂಗಳೂರು)

ಶ್ರೀ ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ. ದಕ್ಷಣ ಕನ್ನಡ ಜಿಲ್ಲೆಯಲ್ಲಿ ಡೆಂಗ್ಯೂ ಜ್ವರ ಮತ್ತು ಚಿಕುನ್‌ಗುನ್ಯಾ ರೋಗಗಳು ತೀವ್ರವಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ. ಹಾಗಿದ್ದಲ್ಲಿ, ಈ ಕಾಯಿಲೆಯಿಂದ ನರಳುತ್ತಿರುವ ರೋಗಿಗಳ ಸಂಖ್ಯೆ ಎಷ್ಟು; ಮೃತಪಟ್ಟವರ ಸಂಖ್ಯೆ ಎಷ್ಟು;

ಡೆಂಗ್ಯೂ ಜ್ವರ ಪ್ರಕರಣಗಳು:

ಶಂಕಿತ ಪ್ರಕರಣಗಳು	ಖಚಿತ ಪ್ರಕರಣಗಳು	ಮರಣ
321	91	2

ಚಿಕುಂಗುನ್ಯ:

ಶಂಕಿತ ಪ್ರಕರಣಗಳು	ಖಚಿತ ಪ್ರಕರಣಗಳು	ಮರಣ
0	0	0

ಇ. ಈ ಕಾಯಿಲೆ (ರೋಗಗಳನ್ನು) ನಿಯಂತ್ರಿಸುವ ಸರ್ಕಾರ ಯಾವ ಯಾವ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ (ವಿವರ ನೀಡುವುದು)?

ಸರ್ಕಾರ ಕೈಗೊಂಡಿರುವ ಮುನ್ನೆಚ್ಚರಿಕೆ ಕ್ರಮಗಳು:

1. ಸರ್ಕಾರದ ಕಾರ್ಯದರ್ಶಿಗಳು, ಆಯುಕ್ತರು ಇವರಿಂದ ದಿನಾಂಕ: 05-01-2009ರಂದು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಮತ್ತು ನಿಯಂತ್ರಣ ಕ್ರಮಗಳ ಬಗ್ಗೆ ವಿವರವಾದ ಮಾರ್ಗದರ್ಶನಗಳನ್ನು ಸುತ್ತೋಲೆಯ ಮೂಲಕ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ನೀಡಲಾಗಿದೆ.
2. ಸರ್ಕಾರದ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಮತ್ತು ಭಾರತ ಸರ್ಕಾರದ ಪರಿಣಿತರ ಸಮ್ಮುಖದಲ್ಲಿ ದಿನಾಂಕ: 22-05-2009 ರಂದು ಜಿಲ್ಲಾ ಮಲೇರಿಯಾ ಅಧಿಕಾರಿಗಳು, ವಲಯ ಉಪ ನಿರ್ದೇಶಕರ ಸಭೆಯನ್ನು ಕರೆದು, ರೋಗನಿಯಂತ್ರಣಗಳ ಬಗ್ಗೆ ಸಲಹೆ ಸೂಚನೆಗಳನ್ನು ನೀಡಲಾಗಿದೆ.
3. ರಾಜ್ಯದ ಕಾರ್ಯಕ್ರಮಾಧಿಕಾರಿಗಳೊಬ್ಬರನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಉಸ್ತುವಾರಿ ಅಧಿಕಾರಿಗಳನ್ನಾಗಿ ನೇಮಿಸಲಾಗಿದ್ದು, ಅಲ್ಲಿಯ ನಿಯಂತ್ರಣ ಕ್ರಮಗಳನ್ನು ಖುದ್ದಾಗಿ ಪರಿಶೀಲಿಸಲಾಗುತ್ತಿದೆ.
4. ಕೇಂದ್ರ ಸರ್ಕಾರದ ಯೋಜನೆಗಳ ಅಡಿಯಲ್ಲಿ ಚಿಕುಂಗುನ್ಯ, ಡೆಂಗ್ಯು ಮತ್ತು ಮಲೇರಿಯಾ ರೋಗಗಳ ನಿಯಂತ್ರಣಕ್ಕಾಗಿ ರೂ. 2,13,600/-ಗಳ ಅನುದಾನವನ್ನು ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.
5. ಕಾಯಿಲೆಯಿಂದ ನರಳುತ್ತಿರುವ ರೋಗಿಗಳ ಚಿಕಿತ್ಸೆಗಾಗಿ ಬೇಕಾದ ಪ್ಯಾರಾಸಿಟಮಲ್, ಡೈಕ್ಲೋಪೆನಿಕ್ ಸೋಡಿಯಂ ಗುಳಿಗೆಗಳು ಮತ್ತು

ಚುಚ್ಚುಮದ್ದುಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಸರಬರಾಜು ಮಾಡಲಾಗಿದ್ದು, ಜಿಲ್ಲೆಯಲ್ಲಿ ಔಷಧಿಗಳಿಗೆ ಯಾವುದೇ ಕೊರತೆ ಇರುವುದಿಲ್ಲ.

6. ರೋಗವಾಹಕ ಸೊಳ್ಳೆಗಳ ತುರ್ತು ನಿಗ್ರಹಕ್ಕಾಗಿ 70 ಧೂಮೀಕರಣ ಯಂತ್ರಗಳು ಲಭ್ಯವಿರುತ್ತದೆ. ಇದಕ್ಕಾಗಿ ಪೈರಥ್ರಮ್ ಎಕ್ಸ್‌ಟ್ರಾಕ್ಟ್ ಕೀಟನಾಶಕವನ್ನು ಸರಬರಾಜು ಮಾಡಲಾಗಿದೆ.
7. ಈಡಿಸ್ ಸೊಳ್ಳೆಗಳ ಉತ್ಪತ್ತಿ ತಾಣಗಳ ಸಮೀಕ್ಷೆ ಹಾಗೂ ನಿರ್ಮೂಲನೆಗಾಗಿ ಮಂಗಳೂರು ನಗರಕ್ಕೆ ಟೆಮಿಪಾಸ್ ದ್ರಾವಣವನ್ನು ಸರಬರಾಜು ಮಾಡಲಾಗಿದೆ.
8. ಮುಂಜಾಗ್ರತಾ ಕ್ರಮವಾಗಿ ಜಿಲ್ಲೆಯ ಎಲ್ಲಾ ಗ್ರಾಮಗಳಲ್ಲಿ ಮನೆಮನೆಗೆ ಭೇಟಿನೀಡಿ ಸೊಳ್ಳೆ ಉತ್ಪತ್ತಿ ತಾಣಗಳನ್ನು ನಾಶಪಡಿಸಲಾಗಿದೆ.
9. ಗ್ರಾಮಾಂತರ ಪ್ರದೇಶಗಳಲ್ಲಿ ಚಿಕಿತ್ಸಾ ಶಿಬಿರಗಳನ್ನು ಸ್ಥಾಪಿಸಿ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ.
10. ಜಿಲ್ಲೆಯಾದ್ಯಂತ ಸೊಳ್ಳೆ ನಿಯಂತ್ರಿಸುವ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳುವಳಿಕೆ ನೀಡಲು ಶಿಬಿರಗಳನ್ನು ನಡೆಸಲಾಗಿದೆ.
11. ಜಿಲ್ಲಾ ಮಟ್ಟ, ತಾಲ್ಲೂಕು ಮಟ್ಟ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ರೋಗ ನಿಯಂತ್ರಣ ಕಾರ್ಯದ ಅಂಗವಾಗಿ ಕಣ್ಗಾವಲು ಸಮಿತಿ ಕಾರ್ಯನಿರ್ವಹಿಸುತ್ತಿದೆ.
12. ವೃತ್ತ ಪತ್ರಿಕೆ, ವಿದ್ಯುನ್ಮಾನ ಮಾಧ್ಯಮ, ಕರ ಪತ್ರ, ಪೋಸ್ಟರ್ ಮುಖಾಂತರ ಜಿಲ್ಲೆಯಾದ್ಯಂತ ಸಾರ್ವಜನಿಕರಿಗೆ ರೋಗನಿಯಂತ್ರಣ ಮಾಹಿತಿ ನೀಡಲಾಗಿದೆ.

Incidence of Chikungunya & Dengue fever in Karnataka 2009 (Up to 7th July)

SL No	Districts	CHIKUNGUNYA				DENGUE	
		Suspected Chikungunya	Blood sample collected	Positive Cases	Death	Attack	Death
*	Bangalore City	1867	581	298	0	34	1
1	Bangalore (U)	480	25	11	0	3	0
2	Bangalore (R)	225	75	23	0	1	0

3	Ramanagar	1230	106	30	0	6	0
4	Kolar	756	148	71	0	7	0
5	Chikkaballapura	240	111	20	0	7	0
6	Tumkur	897	120	38	0	4	0
7	Chitradurga	116	55	25	0	3	0
8	Davangere	16	14	7	0	1	0
9	Shimoga	382	79	39	0	12	0
10	Belgaum	274	28	22	0	13	0
11	Bijapur	264	64	20	0	4	0
12	Bagalkote	16	9	5	0	16	0
13	Dharwar	507	448	150	0	84	0
14	Gadag	338	33	19	0	6	0
15	Haveri	905	224	82	0	58	0
16	U.Kannada	1367	213	110	0	36	0
17	Gulbarga	73	4	0	0		
18	Bidar						
19	Bellary	20	20	11	0		
20	Raichur						
21	Koppal	16	2	0	0		
22	Mysore	188	43	12	0	9	0
23	Chamarajanagar	60	7	1	0	2	0
24	Mandya	78	8	3	0		
25	Hassan	6	6	3	0	2	0
26	Dakshina Kannada	321	96	0	0	91	2
27	Udupi	82	32	16	0		
28	Chikmagalur	68	14	6	0	3	0
29	Kodagu	44	17	6	0		
Total		**10515**	**2486**	**1028**	**0**	**402**	**3**

ಶ್ರೀ ಯು.ಟಿ.ಖಾದರ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಅಲ್ಲಿ ವಸ್ತುಸ್ಥಿತಿ ಬೇರೆ ಇದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ಮಂಗಳೂರು ಗ್ರಾಮಾಂತರ ಪ್ರದೇಶ ಜನರು ಇವತ್ತಿನ ದಿವಸ ಭಯದ ವಾತಾವರಣದಿಂದ ತತ್ತರಿಸುತ್ತಿದ್ದಾರೆ. ಕಳೆದ ವರ್ಷ ಚಿಕುನ್‌ಗುನ್ಯ ಬಂದಿತ್ತು. ಜ್ವರ ಹೋಗಿದ್ದರು ಕೂಡ ನೋವು ಮಾತ್ರ ಇನ್ನೂ ಹೋಗಿಲ್ಲ. ಇದರ ಜೊತೆಗೆ ಈ ವರ್ಷ ಡಂಗ್ಯೂ ಜ್ವರ, ಇಲ್ಲಿ ಜ್ವರ, ಹಂದಿ ಜ್ವರ, ಇದೇ ರೀತಿಯಾಗಿ ಬೇರೆ ಬೇರೆ

ಜ್ವರಗಳು ಬಂದು ಬಹಳಷ್ಟು ಭಯದ ವಾತಾವರಣ ಇದ್ದಾಗಲೂ ಕೂಡ ಇದರ ಬಗ್ಗೆ ಮುಂಜಾಗ್ರತ ಕ್ರಮ ತೆಗೆದುಕೊಳ್ಳಲು ಸರ್ಕಾರ ವಿಫಲವಾಗಿದೆ. ಸರ್ಕಾರ ಎರಡು ಕಡೆ ಅಂದರೆ ಪ್ರಿವೆಂಟಿವ್ ಅಂಡ್ ಕ್ಯೂರಿಂಗ್ ಕಡೆಯೂ ಕೂಡ ಫೇಲ್ಯೂರ್ ಆಗಿದೆ. ಸೊಳ್ಳೆಗಳ ಉತ್ಪಾದನೆಯನ್ನು ತಡೆಗಟ್ಟುವ ದೃಷ್ಟಿಯಲ್ಲಿ ಸರ್ಕಾರ ಯಾವ ರೀತಿಯಾದ ಕ್ರಮಗಳನ್ನು ಕೈಗೊಂಡಿದೆ ಎಂಬುದನ್ನು ಹೇಳಬೇಕು. ಇದಕ್ಕೆ ಏನಾದರು ಹಣ ಬಿಡುಗಡೆಯಾಗಿದೆಯೇ? ಇವತ್ತಿನ ದಿವಸ ಸರಿಯಾದಂಥ ಫಾಗಿಂಗ್ ಮೆಷಿನ್ ಇಲ್ಲ. ಕಳೆದ ವರ್ಷ ಮುಂಜಾಗ್ರತ ಕ್ರಮಕ್ಕಾಗಿ ಎಷ್ಟು ಅನುದಾನ ಬಿಡುಗಡೆಯಾಗಿದೆ ಎಂದು ಮತ್ತು ಈ ಹಣದಿಂದ ಯಾವ್ಯಾವ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿದ್ದೀರಿ ಎಂಬ ಬಗ್ಗೆ ಮಾಹಿತಿ ನೀಡಬೇಕು.

ಶ್ರೀ ಬಿ.ಶ್ರೀರಾಮುಲು:– ಸನ್ಮಾನ್ಯ ಸಭಾಧ್ಯಕ್ಷರೆ, 2009ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 402 ಡೆಂಗ್ಯೂ ಜ್ವರ ಪ್ರಕರಣಗಳು ವರದಿಯಾಗಿವೆ. ಇದರಲ್ಲಿ ದಕ್ಷಿಣ ಕನ್ನಡದಲ್ಲಿ 2 ಮತ್ತು ಬೆಂಗಳೂರಿನಲ್ಲಿ 1 ಡೆತ್ ಆಗಿವೆ. ಡೆಂಗ್ಯೂ ಮತ್ತು ಚಿಕುನ್‌ಗುನ್ಯಾ ರೋಗಗಳು ಯಾವ ರೀತಿಯಾಗಿ ಬರುತ್ತವೆಂಬ ವಿಷಯಗಳು ಮಾನ್ಯ ಸಭಾಧ್ಯಕ್ಷರಿಗೆ ಮತ್ತು ಇಲ್ಲಿರತಕ್ಕಂಥ ಎಲ್ಲರಿಗೂ ಕೂಡ ಗೊತ್ತಿದೆ. ಎಲ್ಲೆಲ್ಲಿ ಸ್ವಚ್ಛತೆ ಇರುವುದಿಲ್ಲವೊ ಅಂಥ ಕಡೆ ಈಡಿ ಎಂಬ ಸೊಳ್ಳೆಯ ಮೂಲಕ ಡೆಂಗ್ಯೂ ಮತ್ತು ಚಿಕುನ್‌ಗುನ್ಯಾ ರೋಗಗಳು ಬರತಕ್ಕಂಥ ಸನ್ನಿವೇಶಗಳು ಬಹಳಷ್ಟು ಕಡೆ ಕಂಡು ಬರುತ್ತವೆ. ಸೊಳ್ಳೆಗಳನ್ನು ತಡೆಯುವುದಕ್ಕೋಸ್ಕರ ಬಹಳಷ್ಟು ಕಡೆ 70 ಫಾಗಿಂಗ್ ಮೆಷಿನ್‌ಗಳು ಕೆಲಸವನ್ನು ಮಾಡುತ್ತಿವೆ. ಕೆಲವು ಕಡೆ ಫಾಗಿಂಗ್ ಮೆಷಿನ್‌ಗಳು ರಿಪೇರಿ ಇರುವುದರಿಂದ ರಿಪೇರಿ ಕೆಲಸವನ್ನು ಮಾಡುವುದಕ್ಕೆ ಈಗಾಗಲೇ ಆದೇಶವನ್ನು ಕೊಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಗೆ ಸುಮಾರು 2 ಕೋಟಿ ರೂಪಾಯಿ ಮಂಜೂರು ಮಾಡಲಾಗಿದೆ. ಜಿಲ್ಲಾಧಿಕಾರಿ ಮತ್ತು ಡಿಹೆಚ್‌ಒ, ಡಿಸ್ಟ್ರಿಕ್ಟ್ ಸರ್ಜನ್‌ಗಳ ಸಭೆಯನ್ನು ಅನೇಕ ಸಲ ಕರೆದು ಅಲ್ಲಿ ಸ್ವಚ್ಛತೆಯನ್ನು ಕಾಪಾಡಬೇಕೆಂದು ಎಲ್ಲಾ ರೀತಿಯಾದ ಮಾಹಿತಿಯನ್ನು ನಾವು ಕೊಟ್ಟಿದ್ದೇವೆ. ಚಿಕುನ್‌ಗುನ್ಯಾ ಮತ್ತು ಡೆಂಗ್ಯೂ ರೋಗಗಳನ್ನು ಯಾವ ರೀತಿಯಾಗಿ ಕಡಿಮೆ ಮಾಡಬೇಕಾಗಿರುತ್ತದೆಯೋ ಆ ಪ್ರಕಾರ ಮುಂಜಾಗ್ರತ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಯು.ಟಿ.ಖಾದರ್:– ಮಾನ್ಯ ಅಧ್ಯಕ್ಷರೆ, ಬಿಡುಗಡೆಯಾಗಿರುವ ಅನುದಾನವನ್ನು ಜಿಲ್ಲಾ ಆರೋಗ್ಯ ಇಲಾಖೆಯವರು ಯಾವ ರೀತಿಯಾಗಿ ಖರ್ಚು ಮಾಡಿದ್ದಾರೆಂಬ ಬಗ್ಗೆ ತನಿಖೆಯಾಗಬೇಕಾಗಿದೆ. 328 ಗ್ರಾಮಗಳಿಗೆ ಸೇರಿ ಅಲ್ಲಿ ಒಟ್ಟು 40 ಫಾಗಿಂಗ್ ಮೆಷಿನ್‌ಗಳನ್ನು ಕಳೆದ ವರ್ಷ ಕೊಟ್ಟಿದ್ದಾರೆ. ಇದರಲ್ಲಿ 25 ಫಾಗಿಂಗ್ ಮೆಷಿನ್ ಮಾತ್ರ ಕೆಲಸ ಮಾಡುತ್ತಿವೆ. ಒಂದು ಮನೆಯನ್ನು ಫಾಗಿಂಗ್ ಮಾಡಬೇಕಾದರೆ ಸುಮಾರು 5 ರಿಂದ 10 ನಿಮಿಷ ಬೇಕಾಗುತ್ತದೆ. ನಮ್ಮ ಕೋರಿಕೆ ಏನೆಂದರೆ, war footing ನಲ್ಲಿ ಅಲ್ಲಿ ಕೆಲಸವಾಗಬೇಕಾಗಿದೆ. ಎಲ್ಲಾ ಯ ಎವ

ಕಮಾಂಡೋಗಳನ್ನು ಮತ್ತು ಎನ್‌ಜಿಒಗಳನ್ನು ಸೇರಿಸಿ ಅವರಿಂದ ಜನಜಾಗೃತೆ ಗೊಳಿಸುವಂಥ ಕೆಲಸ ಮಾಡಿಸಬೇಕು. ಇದಕ್ಕಾಗಿ ಎನ್‌ಜಿಒ ಗಳಿಗೆ ಅನುದಾನ ಕೂಡ ಬಿಡುಗಡೆ ಮಾಡಬೇಕು. ಮತ್ತೆ ಅವರಿಗೆ ಪ್ರೋತ್ಸಾಹ ಕೊಡುವಂಥ ಕೆಲಸ ಕೂಡ ಆಗಬೇಕು. ಇದರ ಜೊತೆಗೆ ಜಿಲ್ಲಾ ಆರೋಗ್ಯ ಕೇಂದ್ರವನ್ನು ಆಧುನೀಕರಣಗೊಳಿಸಬೇಕಾಗುತ್ತದೆ. ಏಕೆಂದರೆ, ನಮ್ಮ ಜಿಲ್ಲಾ ಆರೋಗ್ಯ ಕೇಂದ್ರಕ್ಕೆ ಹೋದರೆ ಇಲ್ಲದೆ ಇರುವ ರೋಗ ಕೂಡ ಬರತಕ್ಕಂಥ ಸ್ಥಿತಿ ಅಲ್ಲಿದೆ. ನನ್ನ ಎರಡು ಸಲಹೆ ಸೂಚನೆಗಳು ಏನೆಂದರೆ, ಮುಂದಿನ ದಿನಗಳಲ್ಲಿ ಸೊಳ್ಳೆಗಳ ಬಗ್ಗೆ ಜಾಗೃತಿ ಮೂಡಿಸಿ ಸೊಳ್ಳೆಗಳ ಉತ್ಪಾದನೆ ಆಗದ ರೀತಿಯಲ್ಲಿ ಕೆಲಸವನ್ನು ಮಾಡಬೇಕೆಂದು ಮಾನ್ಯ ಆರೋಗ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ನೆ.ಲ.ನರೇಂದ್ರ ಬಾಬು: ಬೆಂಗಳೂರು ನಗರದಲ್ಲಿ highest report ಆಗಿರುವಂಥದ್ದು. (ಗೊಂದಲ) ನನ್ನ ಕ್ಷೇತ್ರದಲ್ಲಿ ಒಬ್ಬ ಶಾಲಾ ಬಾಲಕ ಡೆಂಗ್ಯೂ ಜ್ವರದಿಂದ ಸತ್ತಿದ್ದಾನೆ. ಇದಕ್ಕೆ ಸರ್ಕಾರದ ಜವಾಬ್ದಾರಿ ಇಲ್ಲವೆ? ಮಹಾನಗರ ಪಾಲಿಕೆಗೆ ವಹಿಸಿ ಸುಮ್ಮನೆ ಕುಳಿತುಬಿಟ್ಟರೆ.

ಅಧ್ಯಕ್ಷರು:ಮಾನ್ಯ ನರೇಂದ್ರಬಾಬುರವರೆ, ನಾನು ನಿಮ್ಮನ್ನು ಅಲೋ ಮಾಡಿರುವುದಿಲ್ಲ.

ಶ್ರೀ ನೆ.ಲ.ನರೇಂದ್ರಬಾಬು: ದಯವಿಟ್ಟು ಸರ್ಕಾರ ಇದರ ಬಗ್ಗೆ ಏನು ಕ್ರಮ ಕೈಗೊಂಡಿರುತ್ತದೆ, ಉತ್ತರವನ್ನು ಕೊಡಿಸಬೇಕು. ಡೆಂಗ್ಯೂ ಜ್ವರ ಇವತ್ತು ಜಾಸ್ತಿಯಾಗಿದೆ.

ಶ್ರೀ ಯು.ಟಿ.ಖಾದರ್: ಅದರ ಜೊತೆಯಲ್ಲಿ ಇವತ್ತು ಸಾವಿನ ಸಂಖ್ಯೆಯಲ್ಲಿ ಜಾಸ್ತಿಯಾಗಿದೆ. ಖಾಸಗಿ ಆಸ್ಪತ್ರೆಯಲ್ಲಿ ಜನರು ನಿಧನ ಹೊಂದಿದ್ದಾರೆ.

ಅಧ್ಯಕ್ಷರು: ಉಪ ಪ್ರಶ್ನೆಗೆ ಏನು ಅರ್ಥವಿದೆ. ಏನಾದರೂ ಸ್ಪೆಷಿಫಿಕ್ ಹೇಳಿ. ಎಲ್ಲರೂ ಒಂದೆ ವಿಷಯದ ಬಗ್ಗೆ ಹೇಳಿದರೆ ಹೇಗೆ? ನನಗೆ ಅರ್ಥವಾಗುತ್ತಿಲ್ಲ. ವಿಸ್ತಾರವಾಗಿ ಚರ್ಚೆ ಮಾಡುವುದಾದರೆ ಬಜೆಟ್ ಮೇಲೆ ಚರ್ಚೆ ಮಾಡಿ.

ಶ್ರೀ ಯು.ಟಿ.ಖಾದರ್: ಜ್ವರದಿಂದ ತೀರಿ ಹೋದರೆ ಅಂಥವರ ಬಗ್ಗೆ ಸ್ಥಳೀಯ ಜಿಲ್ಲಾ ಆರೋಗ್ಯ ಇಲಾಖೆಯವರ ಹತ್ತಿರ ಸೂಕ್ತವಾದ ಮಾಹಿತಿ ಇರುತ್ತದೆ. ಏಕೆ ಇವತ್ತು ಅವರು ಮಂತ್ರಿಗಳಿಗೆ ಮಾಹಿತಿಯನ್ನು ಕೊಡುತ್ತಿಲ್ಲ. ಸೂಕ್ತವಾದ ವ್ಯವಸ್ಥೆಯನ್ನು ಜಿಲ್ಲಾ ಆರೋಗ್ಯ ಇಲಾಖೆಯವರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಶ್ರೀರಾಮುಲು: ಡೆಂಗ್ಯೂ ಮತ್ತು ಚಿಕನ್ ಗುನ್ಯಾ ಖಾಯಿಲೆ ಜಾಸ್ತಿಯಾಗುತ್ತಿದೆ. ಯಾವ ರೀತಿಯಲ್ಲಿ ಕಾರ್ಯಕ್ರಮಗಳು ಜಾರಿಗೆ ತರುತ್ತೀರಿ ಎನ್ನುವ ಭಾವನೆಯನ್ನು ಮಾನ್ಯ ಖಾದರ್‌ರವರು ವ್ಯಕ್ತಪಡಿಸಿದ್ದಾರೆ. ಇವತ್ತು ಜಿಲ್ಲಾಧಿಕಾರಿಗಳ ಮೂಲಕ ನಮ್ಮ ಆರೋಗ್ಯ ಇಲಾಖೆಯ ವತಿಯಿಂದ ತಮ್ಮ ಫಾಕಿಂಗ್ ಮೆಷಿನ್‌ಗಳು ಏನು ಕೆಟ್ಟು ಹೋಗಿವೆ ಅವುಗಳನ್ನು ರಿಪೇರಿ

ಮಾಡಿಸಿಕೊಡಲಾಗುತ್ತದೆ. ಭಗವಂತನ ಆಶೀರ್ವಾದದಿಂದ ಇವತ್ತು ಮಳೆ ಬಂದ ಕಾರಣದಿಂದ ಸಾಕಷ್ಟು ಸೊಳ್ಳೆಗಳು ಕಡಿಮೆಯಾಗಿ ಸಾಕಷ್ಟು ಖಾಯಿಲೆಗಳು ನಿಯಂತ್ರಣ ಆಗಿರುವಂಥ ಸನ್ನಿವೇಶವನ್ನು ಇವತ್ತು ನಾವು ಕಾಣುತ್ತಿದ್ದೇವೆ. ತಾವು ಸೊಳ್ಳೆಗಳ ನಿಯಂತ್ರಣದ ಬಗ್ಗೆ ಏನೇನು ಸಲಹೆಗಳನ್ನು ಕೊಟ್ಟಿರುತ್ತೀರಿ ಅದರ ಸ್ವಚ್ಚತೆಯನ್ನು ಕಾಪಾಡುವುದರ ಬಗ್ಗೆ, ಸ್ತ್ರೀಶಕ್ತಿ ಮತ್ತು ಸ್ವಸಹಾಯ ಗುಂಪುಗಳ ಬಗ್ಗೆ, ನಗರ ಪಾಲಿಕೆಗೆ ಮತ್ತು ನಗರ ಸಭೆಗಳಿಗೆ, ಗ್ರಾಮ ಪಂಚಾಯಿತಿಗಳಿಗೆ ಒಂದು ಸ್ವಚ್ಚತೆಯನ್ನು ಕಾಪಾಡುವುದರ ಸಲುವಾಗಿ ಏನು ಮಾಡಬೇಕು ಅದನ್ನು ನೋಡಿಕೊಂಡು ಆದಷ್ಟು ಮುಂಜಾಗ್ರತೆಯ ಕ್ರಮವನ್ನು ನಾವು ತೆಗೆದುಕೊಂಡು ಮಾಡುತ್ತೇವೆ.

ವಿಷಯ ಚಿತ್ರದುರ್ಗ ಜಿಲ್ಲೆಗೆ ಪರಿಶಿಷ್ಟ ವರ್ಗದ ಅಭಿವೃದ್ಧಿಗೆ ಬಿಡುಗಡೆಯಾದ ಅನುದಾನದ ಬಗ್ಗೆ

15(117)ಶ್ರೀ ತಿಪ್ಪೇಸ್ವಾಮಿ(ಚಳ್ಳಕೆರೆ)
ಶ್ರೀ ಡಿ.ಸುಧಾಕರ, (ಮಾನ್ಯ ಸಮಾಜ ಕಲ್ಯಾಣ ಸಚಿವರು)

ಅ 2008–09ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆಗೆ ಪರಿಶಿಷ್ಟ ವರ್ಗದ ಅಭಿವೃದ್ಧಿಗೆಂದು ಬಿಡುಗಡೆಯಾದ ಅನುದಾನವೆಷ್ಟು; ವಿವಿಧ ಯೋಜನೆಗಳಡಿ ಬಿಡುಗಡೆಗೊಳಿಸಿದ ಅನುದಾನದ ಪೂರ್ಣ ವಿವರ ನೀಡುವುದು;

2008–09ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆಗೆ ಪರಿಶಿಷ್ಟ ವರ್ಗದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಬಿಡುಗಡೆಯಾದ ಅನುದಾನದ ವಿವರ ಕೆಳಕಂಡಂತಿದೆ.

(ಲಕ್ಷ ರೂ.ಗಳು)

ಕ್ರ.ಸಂ	ಯೋಜನೆಗಳು	ಬಿಡುಗಡೆಯಾದ ಅನುದಾನ
1	ವಿಶೇಷ ಕೇಂದ್ರೀಯ ಸಹಾಯಧನ	122.766
2	ಭಾರತ ಸಂವಿಧಾನ ಅನುಚ್ಛೇದ 275(1)ರ ಅನುದಾನ	124.80
3	ಗಿರಿಜನ ಉಪಯೋಜನೆಯಡಿ ಕ್ರೋಢೀಕರಿಸಿದ ಅನುದಾನ	252.50
	ಒಟ್ಟು	**500.066**

ಆ ಬಿಡುಗಡೆಯಾದ ಅನುದಾನದಲ್ಲಿ ಜಿಲ್ಲೆ ಹಾಗೂ ತಾಲ್ಲೂಕುಗಳಿಗೆ ಹಂಚಿಕೆ ಮಾಡಲಾದ ಹಣದ ವಿವರಗಳನ್ನು ನೀಡುವುದು;